

## ಅಜ್ಜಿ ಹೋಳಿಗೆ

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ (ವಗ್ಗೆರೆ) ರಟಗಲ್ ರೇವಣಸಿದ್ಧೇಶ್ವರ ದೇವಸ್ಥಾನದಲ್ಲಿ ವಿವಾಹ, ಜಾವಳ ಮುಂತಾದ ಕಾರ್ಯಕ್ರಮ ನಡೆಯುವವು. ಅಂಥ ಸಂದರ್ಭದಲ್ಲಿ ಈ ಅಜ್ಜಿ ರುಚಿಕರವಾದ ಹೋಳಿಗೆ ಮಾಡುವಳು. ಬಯಲು ಜಾಗೆಯಲ್ಲೆ ಒಲೆ ಹಾಕಿ ಸುಂದರ ಪ್ರಕೃತಿ ಮಡಿಲಲ್ಲಿ ಸ್ವಾದಿಷ್ಟವಾದ ಹೋಳಿಗೆ ಬರುವ ಭಕ್ತರಿಗೆ ಗುರು ಜಂಗಮರಿಗೆ ಉಣಿಸಿ ಕೃತಾರ್ಥಳಾಗುತ್ತಾಳೆ. ಹಣ ಪಡೆದರೂ ಅಡ್ಡಿಯಿಲ್ಲ, ಆದರೆ ಈಕೆಯ ಕೈಯಿಂದ ಮಾಡಿದ ಹೋಳಿಗೆ ಮೃಷ್ಟಾನ್ನ ಭೋಜನ ಮಾಡಿದರೆ ಪ್ರತಿಯೊಬ್ಬ ಭಕ್ತ ಸ್ವರ್ಗಕ್ಕೆ ಕಿಚ್ಚು ಹಚ್ಚೆನ್ನುತ್ತಾನೆ.

—ಮಂದಾಕಿನಿ ಪಾಟೀಲ, ವಿಜಯಪುರ



## ದೇವನಪಲ್ಲಿಯ ಐತಿಹಾಸಿಕ ಗಣೇಶ

ರಾಯಚೂರು ಅನೇಕ ರಾಜಮನೆತನಗಳು ಆಳಿದ ಐತಿಹಾಸಿಕ ನಗರಿ. ಇಲ್ಲಿಯ ನೆಲದ ಮೇಲೆ ಅನೇಕ ಕೋಟೆಗಳು, ವಿವಿಧ ಸ್ಮಾರಕಗಳು, ಅಸಂಖ್ಯಾತ ಕುರುಹುಗಳು ಕಂಡು ಬರುತ್ತವೆ. ಇದರಂತೆ ರಾಯಚೂರಿನಿಂದ 9 ಕಿ.ಮೀ ದೂರದಲ್ಲಿರುವ ಮತ್ತು ಮಟ್ಟಿ ಮಲ್ಲಾಪುರ ಗ್ರಾಮಕ್ಕೆ ಸಮೀಪ ಇರುವ ಪುಟ್ಟ ಗ್ರಾಮ ದೇವನಪಲ್ಲಿಯಲ್ಲಿ ಈಗಲೂ ಅನೇಕ ಸ್ಮಾರಕಗಳನ್ನು ಕಾಣಬಹುದು. ಒಂದು ಐತಿಹ್ಯದ ಪ್ರಕಾರ ಈ ಹಿಂದೆ ಈ ಪ್ರದೇಶದಲ್ಲಿ ಕೃಷ್ಣದೇವರಾಯನು ತನ್ನ ಆರಾಧ್ಯ ದೈವ ತಿರುಪತಿಯ ಶ್ರೀ ವೆಂಕಟೇಶ್ವರ ಮೂರ್ತಿಯನ್ನು ಇಲ್ಲಿ ಇಟ್ಟು ಪೂಜಿಸಿದ್ದ ಎಂಬ ಐತಿಹ್ಯವಿದೆ. ಅದೇ ಕಾರಣಕ್ಕೆ ಇದು ದೇವನಪಲ್ಲಿ ಎಂದು ಕರೆಯಲಾಗುತ್ತದೆ ಎನ್ನಲಾಗಿದೆ. ದೇವನಪಲ್ಲಿ ಎಂಬುದು ತೆಲುಗು ಪದವಾಗಿದ್ದು ಕನ್ನಡದಲ್ಲಿ ದೇವನೂರು ಎಂಬುದು ಅದರರ್ಥ. ಚಿತ್ರದಲ್ಲಿರುವ ಗಣೇಶ ಮೂರ್ತಿಯು ಇದೇ ದೇವನಪಲ್ಲಿ ಗ್ರಾಮದ ಪಂಚಲಿಗೇಶ್ವರ ದೇವಸ್ಥಾನದ ಬದಿಗೆ ಇರಿಸಿರುವ ಐತಿಹಾಸಿಕ ಮೂರ್ತಿಯಾಗಿದೆ. ಇದರಂತೆ ಇಲ್ಲಿ ಹಾಳು ಬಿದ್ದ ಹನುಮಪ್ಪನ ಗುಡಿ, ಇತಿಹಾಸ ಹೇಳುವ ಭಗ್ನಶಿಲೆಗಳು ಊರತುಂಬಾ ಕಾಣಸಿಗುತ್ತವೆ.

—ಈರಣ್ಣ ಬೆಂಗಾಲಿ, ರಾಯಚೂರು.

## ಮೂಕ ಪ್ರಾಣಿಯ ಶೋಷಣೆ

ವ್ಯಕ್ತಿಯೊಬ್ಬ ಸಾಯಿಬಾಬ ರಥದಲ್ಲಿ ಐದು ಕಾಲಿನ ಹಸು, 'ಬನ್ನಿರಣ್ಣಾ ಬನ್ನಿ ಈ ಪುಣ್ಯ ಆಕಳಿನ ದರ್ಶನ ಮಾಡಿ ಪಾವನರಾಗಿ' ಎಂದು ಕೂಗುತ್ತಿದ್ದರು. ಇಕ್ಕಟ್ಟಿನ ಪಿಕ್ ಅಪ್ ವಾಹನದಲ್ಲಿ ಸೃಷ್ಟಿ ವೈಚಿತ್ರ್ಯದಿಂದ ಶರೀರದ ಮೇಲ್ಭಾಗದಲ್ಲಿ ಹೆಚ್ಚುವರಿ ಕಾಲಿನ ರೂಪದ ಅಂಗವನ್ನು ಹೊಂದಿದ ಹಸುವನ್ನು ಇರಿಸಿ ಊರೂರು ತಿರುಗಿ ಕಾಣಿಕೆ ರೂಪದಲ್ಲಿ ಹಣವನ್ನು ಸಂಗ್ರಹಿಸುತ್ತಿರುವ ದೃಶ್ಯವನ್ನು ಈಚೆಗೆ ನೋಡಿದೆ. ಆ ಹಸು ಬೇರೆ ಯಾವುದೇ ಊನವಿಲ್ಲದೇ ಸ್ವತಂತ್ರವಾಗಿ ನಡೆದಾಡುವಷ್ಟು ಸಶಕ್ತವಾಗಿದೆ. ಆ ಹೆಚ್ಚುವರಿ ಅಂಗವನ್ನು ಚಿಕಿತ್ಸೆಯ ಮೂಲಕ ಬೇರ್ಪಡಿಸಬಹುದಿತ್ತು. ಆದರೆ, ಅದನ್ನು ಸ್ವತಂತ್ರವಾಗಿ ಇರಲು ಬಿಡದ ದೈವತ್ವದ ಬಣ್ಣ ಬಳಿದ ಆ ವ್ಯಕ್ತಿ ಹಣ ಗಳಿಕೆಗೆ ಬಳಸಿಕೊಳ್ಳುತ್ತಿದ್ದದ್ದು ವಿಪರ್ಯಾಸವೇ ಸರಿ.

'ಉದರ ನಿಮಿತ್ತಂ ಬಹುಕೃತ ವೇಷಂ' ಎಂಬ ನುಡಿಗೆ ಉದಾಹರಣೆಯಂತೆ ಮನುಷ್ಯ ಮೂಕ ಪ್ರಾಣಿಗಳನ್ನೂ ಬಿಡದೇ ಕಾಡುವ ಪರಿ ಕಂಡು ಖೇದವೆನಿಸಿತು. ದುಡಿಮೆಗೆ ನೇರ ಪರಿಶ್ರಮದ ಮಾರ್ಗ ಅನುಸರಿಸದೇ, ಮೂಕ ಪ್ರಾಣಿಗಳನ್ನು ಶೋಷಿಸುವುದು ಖಂಡನೀಯ. ಸ್ವಚ್ಛಂದವಾಗಿ ಬದುಕುವ ಇಚ್ಛೆ ಮತ್ತು ಹಕ್ಕು ಪ್ರಾಣಿಗಳಿಗೂ ಇವೆ ಎಂದು ಇಂತಹವರಿಗೆ ತಿಳಿ ಹೇಳುವವರಾರು?

—ಕೆ. ರಾಮಕೃಷ್ಣ, ಸೀಬಿನಕೆರೆ, ತೀರ್ಥಹಳ್ಳಿ

